"ರಾಖಿ ಬಹಳ ಬುದ್ಧಿವಂತೆ. ಸಾಯಿರಾ ಮದುವೆಗೆ ಬಂದೇ ಬರುತ್ತಾಳೆಂದು ಬಲ್ಲ ಆಕೆ, ತಪ್ಪಿಸಿಕೊಳ್ಳಲು ಸಾಯಿರಾಳನ್ನು ಚೆನ್ನಾಗಿ ಉಪಯೋಗಿಸಿಕೊಂಡಿದ್ದಾಳೆ. ಅದಕ್ಕಾಗಿಯೇ ಬುರ್ಖಾ ತಂದದ್ದು ಎಂಬುದು ಸ್ಪಷ್ಟ. ಈಗ ನಾವು ಪತ್ತೆ ಮಾಡಬೇಕಾದ್ದು ಷರಬತ್ತಿನಲ್ಲಿ ನಿದ್ರೆ ಮಾತ್ರೆ ಸೇರಿಸಿದವರಾರು ಎನ್ನುವುದು. ಅದನ್ನು ತಂದ ಹುಡುಗನಲ್ಲಿ ವಿಚಾರಿಸಿದರೆ, ಅದರ ಸೂತ್ರಧಾರಿ ಪತ್ತೆಯಾಗುತ್ತಾನೆ!"

"ಒಳ್ಳೆಯ ಐಡಿಯಾ!!"

ಆದರೆ, ನಮ್ಮ ಖುಷಿ ಹೆಚ್ಚು ಕಾಲ ಉಳಿಯಲಿಲ್ಲ. ಷರಬತ್ತಿನಲ್ಲಿ ಮಾತ್ರೆ ಹಾಕಲು ಆತನಿಗೆ ರಾಖಿಯೇ ಹೇಳಿದ್ದಳಂತೆ!

"ಕರಮಚಂದ, ನಾವೆಂತಹಾ ಮೂರ್ಖರು! ಈ ಯೋಜನೆ ಹಾಕಿದ್ದು ರಾಖಿ ತನ್ನ ಪ್ರಿಯಕರನ ಜೊತೆ ಸೇರಿ!! ಬೇರೆ ಸಾಧ್ಯತೆಯೇ ಇಲ್ಲ. ಆದರೆ, ಆತ ಬಂದಿದ್ದನ್ನು ಯಾರೂ ಗಮನಿಸಿಲ್ಲ ಏಕೆ? ರಾಖಿ ಕಡೆಯದಾಗಿ ವಾಶ್ ರೂಮಿನತ್ತ ಹೋಗಿದ್ದಾಳೆ. ನಾವೊಮ್ಮೆ ಅಲ್ಲಿ ಹೋಗಿ ಪರಿಶೀಲನೆ ಮಾಡುವುದು ಒಳ್ಳೆಯದಲ್ಲವೇ?"

ಸಭಾಂಗಣದ ಹಿಂಭಾಗದಲ್ಲಿ ಹುಡುಕಾಟ ನಡೆಸಿದಾಗ ಹೊಳೆಯುವ ವಸ್ತು ನನ್ನ ಗಮನ ಸೆಳೆಯಿತು. ಅದೊಂದು ಗೆಜ್ಜೆಯ ತುಂಡು! ನಾನು ಅದನ್ನು ಕರಮಚಂದನಿಗೆ ತೋರಿಸಿದೆ.

"ಇದು ರಾಖಿಯದ್ದು ಆಗಿರಬೇಕು. ಗಡಿಬಿಡಿಯಲ್ಲಿ ಓಡುವಾಗ ಗೆಜ್ಜೆ ತುಂಡಾಗಿದೆ. ಹಾಗಿದ್ದರೆ ಆಕೆ ಹಿಂಭಾಗವಾಗಿಯೇ ಹೋಗಿದ್ದಾಳೆ. ಕರಮಚಂದ, ಇಲ್ಲಿ ಪಾಗಾರ ಬಹಳಷ್ಟು ಎತ್ತರವಾಗಿದೆ. ಆಕೆ ಜಿಗಿದು, ಓಡಿ ಹೋಗಲು ಸಾಧ್ಯವೇ ಇಲ್ಲ. ಆಕೆ ಸಭಾಂಗಣದ ಎದುರಿನ ಗೇಟಿನ ಮೂಲಕವೇ ಹೋಗಿರಬೇಕು. ನಾವು ಮತ್ತೆ ಸಿಸಿಟೀವಿ ನೋಡುವುದು ಒಳ್ಳೆಯದು!"

ಮತ್ತೆ ನಾವು ಸಿಸಿಟೀವಿ ಅಧ್ಯಯನ ಮಾಡಿದೆವು. ಹನ್ನೆರಡೂವರೆಯ ಬಳಿಕ, ಗೇಟಿನ ಮೂಲಕ ಒಳಗೆ ಬಂದ ವಾಹನಗಳ ಸಂಖ್ಯೆಯೇ ಜಾಸ್ತಿಯಿತ್ತು. ಕೇವಲ ಎರಡು ಕಾರುಗಳು ಹೊರಗಡೆ ಹೋಗಿದ್ದವು. ಬುರ್ಖಾಧಾರಿಯಾದ ಯಾರೂ ನಡೆದು ಹೋಗಿದ್ದು ಕಾಣಿಸಲಿಲ್ಲ. ಒಂದಿಬ್ಬರು ಪುರುಷರು, ಮಹಿಳೆಯರು ಹೊರ ಹೋಗಿದ್ದು ದಾಖಲಾಗಿತ್ತು. ಅಂದರೆ, ಆಕೆ ಆ ಎರಡು ಕಾರುಗಳ ಪೈಕಿ ಒಂದರಲ್ಲಿ ಹೋಗಿರಬೇಕು.

"ಕರಮಚಂದ, ಒಂದು ಅನುಮಾನ. ನೀನು ಆಗ ಡಿಸೋಜನಿಗೆ ಹೇಳಿದ ವಾಹನ ಸಂಖ್ಯೆಯ ಕಾರು ಹೊರಹೋಗಿದ್ದು ಇಲ್ಲಿ ಕಾಣಲಿಲ್ಲ. ನೀನು ಯಾಕೆ ಆ ಸಂಖ್ಯೆ ಹೇಳಿದಿ?"

ಅಷ್ಟರಲ್ಲಿ ಹೊರಗಡೆ ಪೊಲೀಸ್ ವಾಹನದ ಸೈರನ್ ಕೇಳಿಸಿತು. ನಾವೆಲ್ಲ ಹೊರಗಡೆ ಧಾವಿಸಿದೆವು. ಜೀಪಿನಿಂದ ಡಿಸೋಜ ಮತ್ತು ಆತನ ಹಿಂದೆ ಬುರ್ಖಾಧಾರಿ ಮಹಿಳೆ! ಆಕೆ ಶಿರ ಮುಚ್ಚಿಕೊಂಡಿರಲಿಲ್ಲ. ರಾಖಿ!

"ಸರ್, ಇವಳನ್ನು ಕರೆ ತರಲು ಯಾಕೆ ಹೇಳಿದಿರಿ? ಯಾವ ಅಪರಾಧ? ನೀವು ವಕೀಲರು, ನಿಮಗೆ ಕಾನೂನು ಗೊತ್ತಲ್ಲ." ಡಿಸೋಜ ಕೇಳಿದ.

"ನಿಮ್ಮನ್ನೆಲ್ಲಾ ಜೈಲಿಗೆ ಹಾಕಿಸ್ತೇನೆ. ವಾರಂಟ್ ಇಲ್ಲದೆ ನನ್ನನ್ನು ಬಂಧಿಸಿ ಕರೆ ತಂದಿದ್ದೀರಿ. ನನ್ನ ಕಾರನ್ನು ತಡೆದಿದ್ದೀರಿ. ಯಾವ ಕಾನೂನಿನ ಅಡಿಯಲ್ಲಿ?" ರಾಖಿ ಜೋರಾಗಿ ಗದರಿದಳು.

"ವಾಸ್ತವವಾಗಿ ನೀನು ಯಾವ ತಪ್ಪನ್ನೂ ಮಾಡಿಲ್ಲ. ಆದರೂ ಓಡಿ ಹೋಗಿದ್ದು ಮಾತ್ರ ಸರಿಯಲ್ಲ. ನಿನ್ನ ಪೋಷಕರಿಗೆ ನಿಜ ಸಂಗತಿ ಹೇಳಿಯೇ ಹೋಗು ಎಂದು ಕರೆದದ್ದು. ನೀನು ದಿಲೀಪ್ ಜೊತೆ ಹೋಗಲು ಯಾರೂ ಅಡ್ಡಿ ಮಾಡುವಂತಿಲ್ಲ."

ಕರಮಚಂದನ ಮಾತಿನಿಂದ ಆಕೆಗೆ ಧೈರ್ಯ ಬಂದಿತು.

"ನೀವಾದ್ರೂ ತಂದೆಯವರಿಗೆ ಹೇಳಿ. ಅವರು ಮಾಡುತ್ತಿರುವುದು ಅನ್ಯಾಯ. ನಾನು ದಿಲೀಪನನ್ನು ಪ್ರೀತಿಸಿದ್ದೇನೆ. ಆತನ ಜೊತೆ ಮದುವೆಯಾಗಲು ತಂದೆ ಬಿಡಲಿಲ್ಲ. ಆತನನ್ನು ಓಡಿಸಿಬಿಟ್ಟರು. ನನಗೆ ಆತನ ಸಂಪರ್ಕವೇ ತಪ್ಪಿ ಹೋಗಿತ್ತು. ಮನೆಯಲ್ಲಿ ಮದುವೆಗೆ ಒತ್ತಾಯಿಸಿದರು. ನಾನು ಒಪ್ಪಿರಲಿಲ್ಲ. ಬಲವಂತದಿಂದ ಒಪ್ಪಿಸಿದರು. ಆಗ ನನ್ನ ಮಾವ ವಿಶುವಲ್ಲಿ ಹೇಳಿ ದಿಲೀಪನನ್ನು ಹುಡುಕುವಂತೆ ಕೇಳಿಕೊಂಡೆ. ಆತನಿಂದಾಗಿ ಒಂದು ವಾರದ ಹಿಂದೆ ದಿಲೀಪನೊಂದಿಗೆ ಮತ್ತೆ ಸಂಪರ್ಕ ಸಾಧ್ಯವಾಯಿತು. ಆದರೆ, ಮನೆಯಲ್ಲಿ ನನ್ನ ಮೇಲೆ ತಂದೆ ನಿಗಾ ಇಟ್ಟಿದ್ದರು. ಹೊರಗೆ ಹೋದರೂ ಯಾರಾದರೂ ಜೊತೆಗಿರುತ್ತಿದ್ದರು. ಹಾಗಾಗಿ, ಕಣ್ಣು ತಪ್ಪಿಸಿ ಓಡಿಹೋಗಲು ಸಾಧ್ಯವಿಲ್ಲ